## 2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು

| | |
|---|---|
| ಎಸ್ ಸಿ : | 270/**19** |

| | | |
|---|---|---|
| ಸಾಕ್ಷಿದಾರರ ಹೆಸರು | **ಮಹಮ್ಮದ್ ಸದ್ದಾಮ್ ಹುಸೇನ್** | |
| ತಂದೆಯ ಹೆಸರು | **ಮಹಮ್ಮದ್ ಇಸ್ಮಾಯಿಲ್** | ಸಾಕ್ಷಿಗೆ ದಿಃ **15.11.2021** ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | **29** ವರ್ಷ | |
| ಉದ್ಯೋಗ | ಗುಜ್ಜರಿ ಕೆಲಸ | ಪಿ.ಡಬ್ಲ್ಯೂ **-05** |
| ವಾಸ ಸ್ಥಳ | ಕ್ಯಾತಮಾರನಹಳ್ಳಿ, ಮೈಸೂರು | ಸಿ.ಡಬ್ಲ್ಯೂ **-06** |

## ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

ಮೃತ ರೇಷ್ಮಾ ಬಾನು ನನಗೆ ಅಕ್ಕ ಆಗಬೇಕು. ಆರೋಪಿ ನನ್ನ ಅಕ್ಕನ ಗಂಡನು ಇರುತ್ತಾನೆ. ನನ್ನ ಅಕ್ಕಾ ರೇಷ್ಮಾ ಬಾನು ಆರೋಪಿಯ ಜೊತೆಗೆ 8 ವರ್ಷದ ಹಿಂದೆ ಮದುವೆ ಆಗಿದ್ದಳು. ನನ್ನ ಅಕ್ಕಾಳಿಗೆ ಆರೋಪಿಯಿಂದ 2 ಗಂಡು ಮಕ್ಕಳು ಮತ್ತು 1 ಹೆಣ್ಣು ಮಗು ಇರುತ್ತಾರೆ. ಆರೋಪಿ ಮತ್ತು ನನ್ನ ಅಕ್ಕಾ ಮದುವೆಯಾದ ಮೇಲೆ 8 ವರ್ಷ, 3 ಮಕ್ಕಳು ಆಗುವವರೆಗೆ ನಮ್ಮ ಮನೆಯಲ್ಲಿಯೇ ಇದ್ದರು. ನಮ್ಮ ಮನೆ ಮಧೀನಾ ಮಸೂದೆ ಹತ್ತಿರ ಕ್ಯಾತಮಾರನ ಹಳ್ಳಿ ಮೈಸೂರಿನಲ್ಲಿ ಇರುತ್ತದೆ. ಆರೋಪಿತನು ತನ್ನ ತಂದೆ, ತಾಯಿ ಮೃತಪಟ್ಟಿದ್ದಾರೆ ತನ್ನ ತಮ್ಮನನ್ನು ನೋಡಿಕೊಳ್ಳುವವರು ಯಾರು ಇಲ್ಲಾ ಎಂದು ನಮ್ಮ ಮನೆಯಲ್ಲಿ ತಂದು ಇಟ್ಟುಕೊಂಡಿದ್ದನು, ಆರೋಪಿತನು ನಮ್ಮ ಅಕ್ಕಾ ಆತನ ತಮ್ಮ ನೌಶಾದ ಈತನ ಜೊತೆಗೆ ಅನೈತಿಕ ಸಂಬಂಧ ಇಟ್ಟು ಕೊಂಡಿದ್ದಾಳೆ ಎಂದು ಹೊಡಿಬಡಿ ಮಾಡಿ ಟಾರ್ಚರ್ ಕೊಡುತ್ತಿದ್ದನು. ಆರೋಪಿತನು ಕಿರುಕುಳ ಕೊಡುತ್ತಿದ್ದರೂ ನಾವು ನಮ್ಮ ಅಕ್ಕನಿಗೆ ಮಕ್ಕಳಿದ್ದಾರೆ ಹೊಂದಿಕೊಂಡು ಹೋಗು ಎಂದು ಬುದ್ದಿವಾದ ಹೇಳುತ್ತಿದ್ದೆವು. ಆರೋಪಿತನು ತಾನು ಕಿರುಕುಳ ಕೊಡುವುದು ನಮಗೆಲ್ಲಾ ಗೊತ್ತಾಗುತ್ತದೆ ಎಂದು, ಬೇರೆ ಮನೆ ಮಾಡಿ ಹೆಂಡತಿ, ಮಕ್ಕಳಿಗೆ ಚೆನ್ನಾಗಿ ನೋಡಿಕೊಳ್ಳುತ್ತೇನೆ ಎಂದು ಹೇಳಿ

ಗಾಯತ್ರಿಪುರಂ ನಲ್ಲಿ ಬಾಡಿಗೆಗೆ ಬೇರೆ ಮನೆ ಮಾಡಿ ಹೆಂಡತಿ ಮಕ್ಕಳೊಂದಿಗೆ ವಾಸವಾಗಿದ್ದರು. ಆರೋಪಿತನು ದಿಃ 22.07.2019 ರಂದು ನಮ್ಮ ಮನೆಯಿಂದ ಹೆಂಡತಿ ಮಕ್ಕಳೊಂದಿಗೆ ಬಾಡಿಗೆ ಮನೆಗೆ ಹೋಗಿರುತ್ತಾರೆ. ದಿಃ 24.07.2019 ರಂದು ರಾತ್ರಿ ನಮ್ಮ ಮನೆಗೆ ಬಂದು ಊಟ ಮಾಡಿಕೊಂಡು, ನಿನ್ನ ಅಕ್ಕಳಿಗೆ ಕೊಲೆ ಮಾಡುತ್ತೇನೆ ಎಂದು ಹೇಳಿ ರಾತ್ರಿ 10.00 ಗಂಟೆಗೆ ತನ್ನ ಮನೆಯ ಕಡೆಗೆ ಹೋದನು. ರಾತ್ರಿ ನನ್ನ ಅಕ್ಕಳಿಗೆ ಟಾರ್ಚರ್ ಕೊಟ್ಟು ದಿಃ 25.07.2019 ರಂದು ಬೆಳಿಗ್ಗೆ 10.00 ಗಂಟೆಗೆ ನನ್ನ ಅಕ್ಕಳಿಗೆ ಕತ್ತು ಕೊಯ್ದು, ಕುತ್ತಿಗೆಯ ಹಿಂದುಗಡೆ, ಎಡ ಪಕ್ಕೆಗೆ ಚುಚ್ಚಿ ಕೊಲೆ ಮಾಡಿರುತ್ತಾನೆ. ಬಾಡಿಗೆ ಮನೆಯ ಮಾಲೀಕರು ನಮ್ಮ ಅಕ್ಕ ಕೊಲೆ ಆದ ಬಗ್ಗೆ ಮಧ್ಯಾಹ್ನ 1.00 ರಿಂದ 2.00 ಗಂಟೆಯ ಸುಮಾರಿಗೆ ನಮಗೆ ತಿಳಿಸಿರುತ್ತಾರೆ. ನಮ್ಮ ಮನೆಯವರೆಲ್ಲಾ ನಮ್ಮ ಅಕ್ಕ ಕೊಲೆ ಆದ ಸ್ಥಳಕ್ಕೆ ಹೋದೆವು. ಸಾಕ್ಷಿಯು ತನ್ನ ಅಕ್ಕಳ ಶವದ ಪೋಟೋಗಳನ್ನು ನೋಡಿ ಗುರುತಿಸಿರುತ್ತಾನೆ ಪೋಟೋಗಳು ಈಗಾಗಲೇ ನಿಪಿ-5 ರಿಂದ ನಿಪಿ-7 ಗುರುತಿಸಲಾಗಿದೆ ಮತ್ತು ಸಾಕ್ಷಿಯು ತನ್ನ ಮೃತ ಅಕ್ಕಳ ಬಟ್ಟೆಗಳನ್ನು ನೋಡಿ ಗುರುತಿಸಿರುತ್ತಾನೆ ಅವು ಈಗಾಗಲೇ ಎಂ.ಓ-2 ರಿಂದ ಎಂ.ಓ-4 ಎಂದು ಗುರುತಿಸಲಾಗಿದೆ. ಆರೋಪಿತನು ಸ್ಥಳದಲ್ಲಿ ಇರಲಿಲ್ಲ, ಓಡಿ ಹೋಗಿದ್ದನು.

(ಈ ಹಂತದಲ್ಲಿ ಮಾನ್ಯ ಪಿ ಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ವಿನಂತಿಸಿರುತ್ತಾರೆ. ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)

**<u>ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>**

ದಿಃ 24.07.2019 ರಂದು ರಾತ್ರಿ 11.00 ಗಂಟೆಯ ಸಮಯಕ್ಕೆ ಆರೋಪಿತನು ನಮ್ಮ ಮನೆಗೆ ಬಂದು ನಿಮ್ಮ ಅಕ್ಕಳಿಗೆ ಕೊಲೆ ಮಾಡುತ್ತೇನೆ ಎಂದು ಹೇಳಿ ನಮ್ಮ ಮನೆಯಲ್ಲಿಯೇ ಮಲಗಿಕೊಂಡಿದ್ದನು ಅಂದರೆ ಸರಿ ಇದೆ. ಸಾಕ್ಷಿ ಹೇಳುತ್ತಾರೆ ಆರೋಪಿ ಮುಂಜಾನೆ ಎಂದು ಹೋಗಿ ನಮ್ಮ ಅಕ್ಕಳ ಕೊಲೆ ಮಾಡಿದ್ದಾನೆ ಎಂದು ಹೇಳುತ್ತಾರೆ.

**<u>ಪಾಟೀಸವಾಲು:-ಆರೋಪಿ ಪರ ವಕೀಲರಿಂದಃ-</u>**

ಸಕಾರಣವಿಲ್ಲದೇ ಸಮಯ ಕೇಳಿದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರುವಿಚಾರಣೆ ಇಲ್ಲ.</u>**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

**ಓ ಹೇ ಕೇ ಸ ಇ ಎ ಒ**

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು